ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 490/2018**

**ಫ್ರಾಸಾ- 8 ಚಾಸಾ- 15**

ಸಾಕ್ಷಿದಾರರ ಹೆಸರುಃ : ಜಗದೀಶ್ ಜಿ

ತಂದೆಯ ಹೆಸರುಃ : ಗಣಪತಿಯಪ್ಪ

ವಯಸ್ಸುಃ : 51 ವರ್ಷ

ಉದ್ಯೋಗಃ : ಜಿಲ್ಲಾಧಿಕಾರಿ

ವಾಸ : ಬೆಂಗಳೂರು

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 19-12-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ದಿನಾಂಕ 24-4-2018ರಿಂದ 7-9-2018ರವರೆಗೆ ಹಾಸನ ಜಿಲ್ಲ ಪಂಚಾಯತ್ ನ ಸಿಇಒ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇದರ ಎಡಿಜಿಪಿ ರವರು ದಿನಾಂಕ 22-3-2018ರ ಪತ್ರದಲ್ಲಿ ಭ್ರಷ್ಟಾಚಾರ ಕಾಯಿದೆಯಡಿಯಲ್ಲಿ ದಾಳಿಗೆ ಒಳಪಟ್ಟ ಹೊಸೂರು ಗ್ರಾ.ಪಂ. ಪಿಡಿಒ ಮನುರವರ ಮೇಲೆ ನ್ಯಾಯಾಲಯಕ್ಕೆ ದೋ.ಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ಕೋರಿದ್ದರು. ಸದರಿ ಪತ್ರದೊಂದಿಗೆ ಪ್ರ.ವ.ವ., ಪಂಚನಾಮೆಗಳು, ಫೋಟೋಗಳು, ಸಾಕ್ಷಿದಾರರಿಗೆ ನೀಡಿದ ನೋಟೀಸುಗಳು, ಸಾಕ್ಷಿದಾರರ ಪಟ್ಟಿ ಮತ್ತು ಪತ್ರದಲ್ಲಿ ಕಾಣಿಸಿದ ಇತ್ಯಾದಿ ದಾಖಲೆಗಳು ಇದ್ದವು. ಅವುಗಳನ್ನು ಪರಿಶೀಲಿಸಿದಾಗ ಸದರಿ ನೌಕರರ ಮೇಲೆ ಅಭಿಯೋಜನಾ ಮಂಜೂರಾತಿಯನ್ನು

ನೀಡಬಹುದೆಂದು ಕಂಡುಬಂದಿದ್ದರಿಂದ ಅಭಿಯೋಜನಾ ಮಂಜೂರಾತಿಯನು 17-5-18ರಂದು ಲೋಕಾಯುಕ್ತ ಬೆಂಗಳೂರು ಇದರ ಎಡಿಜಿಪಿರವರಿಗೆ ನೀಡಿರುತ್ತೇನೆ. ಆ ಮಂಜೂರಾತಿ ಆದೇಶವನ್ನು ಈಗ ನೋಡುತ್ತಿದ್ದು ನಿಪಿ-47 ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-47(ಎ) ಎಂದು ಗುರುತಿಸಲಾಯಿತು. ನಿಪಿ-47ರಲ್ಲಿ ಬೆರಳಚ್ಚು ತಪ್ಪಿನಿಂದಾಗಿ ನೇಮಕಾತಿ ಪ್ರಾಧಿಕಾರ ಜಿ ಜಗದೀಶ್ ಎಂಬ ಬದಲಾಗಿ ಕೆ ಎಂ ಜಾನಕಿ ಎಂದು ತಪ್ಪಾಗಿ ನಮೂದಾಗಿರುತ್ತದೆ, ಅದನ್ನು ಜಿ ಜಗದೀಶ್ ಎಂದು ಓದಿಕೊಳ್ಳಬೇಕಾಗಿ ಕೋರುತ್ತೇನೆ.

**ಪಾಟೀಸವಾಲುಃ 1ನೇ ಆರೋಪಿ ಪರ ಕೆಎಎಸ್ ವಕೀಲರಿಂದಃ**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನಾನು ನೇರವಾಗಿ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿಯು ನಾನು ಸಿಇಓ ಆಗಿ ಪ್ರಭಾರ ವಹಿಸಿಕೊಳ್ಳುವುದಕ್ಕಿಂತ ಮೊದಲೇ ಪತ್ರ ಮತ್ತು ದಾಖಲೆಗಳು ಕಛೇರಿಯಲ್ಲಿ ಸ್ವೀಕೃತಗೊಂಡಿದ್ದವು ಎನ್ನುತ್ತಾರೆ. ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡುವುದಕ್ಕಿಂತ ಮೊದಲು ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿರುತ್ತೇನೆ. ನಾು ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡುವುದಕ್ಕಿಂತ ಮೊದಲು ನನ್ನ ಅಧೀನ ನೌಕರರು ಕರಡು ಆದೇಶ ಪ್ರತಿಯನ್ನು ತಯಾರಿಸುತ್ತಾರೆಂದರೆ ಸರಿ. ಅವರು ತಯಾರು ಮಾಡುವ ಕರಡು ಆದೇಶದ ಪ್ರತಿಗೆ ನಾನು ಸಹಿ ಹಾಕುವುದು ಎಂದರೆ ಸಾಕ್ಷಿಯ ಪರಿಶೀಲನೆ ಮಾಡಿ ಸಹಿ ಹಾಕಿರುತ್ತೇನೆ ಎನ್ನುತ್ತಾರೆ. ನನ್ನ ಅಧೀನ ನೌಕರರು ಮಾಡಿರುವ ನೋಟ್ ಶೀಟ್ ಮತ್ತು ದಾಖಲೆಗಳ ಆಧಾರದಲ್ಲಿ ನಾನು ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡಿರುವುದು ಎಂದರೆ ಸಾಕ್ಷಿಯು ಪರಿಶೀಲನೆ ಮಾಡಿ ನೀಡಿರುತ್ತೇನೆ ಎನ್ನುತ್ತಾರೆ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ಸರಿಯಾಗಿ ದಾಖಲೆಗಳನ್ನು ಪರಿಶೀಲಿಸದೆ ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2ನೇ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**